ಊ. ಕರವನ್ನು ವಸೂಲು ಮಾಡುವುದು ನಿಲ್ಲಿಸುವ ಕುರಿತು ಸರ್ಕಾರದವರು ತೆಗೆದುಕೊಂಡ ಕ್ರಮವೇನು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮಂತ್ರಿಗಳು) :--

ಅ. ಸೇತುವೆ ನಿರ್ಮಾಣದ ಒಟ್ಟು ಖರ್ಚು ರೂ. 1,32,10,803-00.

ಆ. ಕೇಂದ್ರ ಸರಕಾರದಿಂದ ಧನ ಸಹಾಯ ಪಡೆದ ಹಣ ರೂ. 45,64,317-00.

ಇ. ರಾಜ್ಯ ಸರಕಾರದಿಂದ ಖರ್ಚಾದ ಹಣ ರೂ. 86,46,486-00.

ಈ. ದಿನಾಂಕ 15-7-1983ರವರೆಗೆ ಒಟ್ಟು ವಸೂಲು ಮಾಡಿದ ಕರ ರೂ.ಗಳು 78,98,000.

ಉ. ಇದುವರೆಗೂ ವಸೂಲಾಗಿರುವ ಕರವು ಸೇತುವೆ ನಿರ್ಮಾಣಕ್ಕೆ ಖರ್ಚಾಗಿರುವುದಕ್ಕಿಂತ ಕಡಿಮೆಯಾಗಿದೆ.

ಊ. ಈ ವಿಷಯವು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಇದು ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಆದರೆ ಕರ ವಸೂಲು ಮಾಡುತ್ತಿರುವುದು ರಾಜ್ಯ ಸರ್ಕಾರವೇ ಎಂಬುದು ನನ್ನ ಭಾವನೆ. ಆದರೆ ರಾಜ್ಯ ಹೆದ್ದಾರಿ ಸಂಖ್ಯೆ 4ರಲ್ಲಿ ಆಗುತ್ತಿರುವಂತಹ ಹಲವಾರು ತೊಂದರೆಗಳನ್ನು ಸರ್ಕಾರದವರು ಗಮನಿಸಿದ್ದಾರೆಯೇ ? ಇದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯ ಏನು ?

ಶ್ರೀ ಎಚ್.ಡಿ. ದೇವೇಗೌಡ.—ತೊಂದರೆಗಳೇನು ?

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—ಒಂದು ಸಲಕ್ಕೆ ಸುಮಾರು 150ಕ್ಕಿಂತ ಹೆಚ್ಚು ವಾಹನಗಳು ನಿಂತುಬಿಡುತ್ತವೆ. ಟ್ಯಾಕ್ಸ್ ವಸೂಲು ಮಾಡುವುದರಿಂದ ಅನಾನುಕೂಲವಾಗುತ್ತದೆ. ಈವರೆಗೆ ಒಟ್ಟು 78 ಲಕ್ಷ ರೂಪಾಯಿಗಳನ್ನು ವಸೂಲು ಮಾಡಲಾಗಿದೆಯೆಂದು ಮಾನ್ಯ ಸಚಿವರು ತಿಳಿಸಿದ್ದಾರೆ. ಇದರ ಮೇಲೆ ಏನು ಮಾಡಬೇಕೆಂಬ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ ? ಇದರಿಂದ ಹೆಚ್ಚು ಜನರಿಗೆ ಅನುಕೂಲವಾಗುವುದಿಲ್ಲ. ಆದ್ದರಿಂದ ಇದನ್ನು ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ.—ಸೇತುವೆ ನಿರ್ಮಾಣಕ್ಕೆ ಒಟ್ಟು ರೂ. 1,32,10,803 ರೂಪಾಯಿಗಳು ಖರ್ಚಾಗಿದೆ. 1 ಕೋಟಿ 32 ಲಕ್ಷ ರೂಪಾಯಿಗಳನ್ನು ಈಗ ವಸೂಲುಮಾಡಬೇಕಾಗಿದೆ. ರಾಜ್ಯ ಹೆದ್ದಾರಿಗಳ ಮೇಲೆ ಇಂತಹ ದೊಡ್ಡ ಪ್ರಮಾಣದ ಸೇತುವೆಯನ್ನು ಕಟ್ಟಿದಾಗ ಕರ ಹಾಕಬೇಕಾಗುತ್ತದೆ. ಸಂಪನ್ಮೂಲ ಸಂಗ್ರಹಣೆ ದೃಷ್ಟಿಯಿಂದ ಇದು ಅವಶ್ಯವಾದದ್ದು. ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸೌಕರ್ಯ ಒದಗಿಸಬೇಕಾದರೆ ಈ ಜನ ಸ್ವಲ್ಪ ಹಣ ಕೊಡಬೇಕಾಗುತ್ತದೆ.

ಶ್ರೀ ವಿ.ಎಸ್. ಕೌಜಲಗಿ.—ಈಗ ತಾವು ರಾಷ್ಟ್ರೀಯ ಹೆದ್ದಾರಿಯ ಮೇಲೆ ಕಟ್ಟಿರತಕ್ಕಂತಹ ಸೇತುವೆಗಳಿಗೆ ಕರವನ್ನು ವಸೂಲು ಮಾಡುತ್ತಿದ್ದೇವೆಂದು ಹೇಳಿದ್ದೀರಿ. ಹಾಗಿದ್ದರೆ, ಇದೇ ರೀತಿಯಲ್ಲಿ ರಾಜ್ಯದಲ್ಲಿ ಇನ್ನೂ ಯಾವ ಯಾವ ಕಡೆಗಳಲ್ಲಿ ಕರವನ್ನು ವಸೂಲು ಮಾಡುತ್ತಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ,—25ಲಕ್ಷ ರೂಪಾಯಿಗಳಿಗಿಂತ ಮೇಲ್ಪಟ್ಟು ಕಟ್ಟಲ್ಪಡುವ ಎಲ್ಲ ಸೇತುವೆಗಳ ಮೇಲೆ ಕರವನ್ನು ಹಾಕಬಹುದೆಂದು ಸೆಂಟ್ರಲ್ ಆಕ್ಟ್‌ನಲ್ಲೇ ಇದೆ.

ಶ್ರೀ ಮಲ್ಲಾರಗೌಡ ಎಸ್. ಪಾಟೀಲ್.—25 ಲಕ್ಷಕ್ಕಿಂತ ಹೆಚ್ಚು ಹಣವನ್ನು ಖರ್ಚು ಮಾಡಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಕಟ್ಟತಕ್ಕಂತಹ ಸೇತುವೆಗಳ ಮೇಲೆ ಕರವನ್ನು ಹಾಕುತ್ತೇವೆಂದು ಹೇಳಿದ್ದೀರಿ. ಇದೇ ರೀತಿ ಮಲಪ್ರಭಾ ನದಿ ಹಾಗೂ ಹಿರಣ್ಯಕೇಶಿ ನದಿಗಳ ಮೇಲೂ ಕಟ್ಟಲ್ಪಡುವ ಸೇತುವೆಗಳ ಮೇಲೂ ಕರವನ್ನು ಹಾಕುತ್ತೀರಾ ?

ಶ್ರೀ ಎಚ್. ಡಿ. ದೇವೇಗೌಡ.—ಹೌದು. ಕಾಳಿ ನದಿಗೆ ಅಡ್ಡಲಾಗಿ ಒಂದು ಸೇತುವೆಯನ್ನು ಕಟ್ಟಿದ್ದೇವೆ. ಅದರ ಒಟ್ಟು ವೆಚ್ಚ 3 ಕೋಟಿ 60 ಲಕ್ಷ ರೂಪಾಯಿಗಳು. ಅಲ್ಲೂ ಕರವನ್ನು ಹಾಕುತ್ತೇವೆ. ಅಂದರೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ 25 ಲಕ್ಷಕ್ಕಿಂತ ಮೇಲ್ಪಟ್ಟು ಹಣವನ್ನು ಖರ್ಚುಮಾಡಿ ಕಟ್ಟತಕ್ಕಂತಹ ಎಲ್ಲ ಸೇತುವೆಗಳ ಮೇಲೂ ಕರವನ್ನು ಹಾಕುವುದಕ್ಕೆ ಕಾನೂನು ಇದೆ, ಆ ಪ್ರಕಾರ ಕ್ರಮವನ್ನು ಕೈಗೊಳ್ಳುತ್ತೀದ್ದೇವೆ. ರಾಜ್ಯದ ಹೆದ್ದಾರಿಗಳಲ್ಲೂ ಕಟ್ಟಲ್ಪಟ್ಟಿರುವ ಹಾಗೂ ಕಟ್ಟಲ್ಪಡುವ ಸೇತುವೆಗಳ ಮೇಲೂ ಇದೇ ರೀತಿಯ ನೀತಿಯನ್ನು ಅನುಸರಿಸಬೇಕೆಂಬುದು ಸರ್ಕಾರದ ಅಭಿಪ್ರಾಯ. ಏಕೆಂದರೆ ನಮ್ಮ ಗ್ರಾಮಾಂತರ ಪ್ರದೇಶಗಳಿಗೆ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕಾಗುತ್ತದೆ. ಆ ರೀತಿಯ ರಸ್ತೆ ಸಂಪರ್ಕವನ್ನು ಕಲ್ಪಿಸಿಕೊಡಬೇಕಾದರೂ ರಾಜ್ಯದ ಸಂಪನ್ಮೂಲವನ್ನು ರೂಢಿಸಿಕೊಳ್ಳಬೇಕಾಗುತ್ತದೆ.

ವಿಷಯ :— ಹೆಸರೂರು ಯಾತ ನೀರಾವರಿ ಮತ್ತು ರಾಟೆ ನೀರಾವರಿ ಯೋಜನೆ (ಮುಂಡರಗಿ ತಾಲ್ಲೂಕು) ಕಾರ್ಯ ಪ್ರಾರಂಭದ ಬಗ್ಗೆ.

ಪ್ರ. 118(17) ಶ್ರೀ ಕೆ. ಹೆಚ್. ಕುರುಡಗಿ (ಮುಂಡರಗಿ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ಮುಂಡರಗಿ ತಾಲ್ಲೂಕು ಹೆಸರೂರು ಏತ ನೀರಾವರಿ, ರಾಟೆ ಯಾತ ನೀರಾವರಿ ಯೋಜನೆಗಳ ಸ್ಥಳ ಮಾಪನ ಮತ್ತು ಅಂದಾಜು ಕಾರ್ಯವನ್ನು ಕೈಕೊಳ್ಳಲಾಗಿದಿಯೇ ;

ಆ. ಹಾಗಿದ್ದರೆ ಇದು ಯಾವ ಹಂತದಲ್ಲಿದೆ ?

ಇ. ಈ ಯೋಜನೆಯಿಂದ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಬಹುದಾಗಿದೆ ;

ಈ. ನಿರ್ಮಾಣಕಾರ್ಯ ಯಾವಾಗ ಪ್ರಾರಂಭವಾಗುತ್ತದೆ ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಸಂಯುಕ್ತ ಏತ ನೀರಾವರಿ ಯೋಜನೆಗೆ ಸ್ಥಳ ಮಾಪನ ಕಾರ್ಯ ಕೈಕೊಳ್ಳಲಾಗಿದೆ.

(2) ರಾಟೆ ಏತ ನೀರಾವರಿ ಯೋಜನೆಯ ಸ್ಥಳ ಮಾಪನ ಕಾರ್ಯ ತೆಗೆದುಕೊಂಡಿಲ್ಲ.

ಆ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಏತ ನೀರಾವರಿ ಯೋಜನೆಯ ಸ್ಥಳಮಾಪನ ನಡೆಯುತ್ತಿದ್ದು, ಅಂದಾಜುಗಳು ತಯಾರಾಗುತ್ತಿದೆ. ಸುಮಾರು ಇನ್ನು ಆರು ತಿಂಗಳಲ್ಲಿ ಮುಗಿಯುವ ನಿರೀಕ್ಷೆಯಿದೆ.

(2) ರಾಟೆ ಏತ ನೀರಾವರಿ ಬಗ್ಗೆ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ. (1) ಹೆಸರೂರು ಮತ್ತು ಅಡವಿ ಹನುಮಪ್ಪ ಸಂಯುಕ್ತ ಏತ ನೀರಾವರಿ ಯೋಜನೆಯಲ್ಲಿ ಸುಮಾರು 4000 ಎಕರೆಗಳು.

(2) ರಾಟೆ ಏತ ನೀರಾವರಿ ಯೋಜನೆಯಲ್ಲಿ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಈ. ಆಯವ್ಯಯ ಅಂದಾಜಿನಲ್ಲಿ ಸೇರಿ ಆಡಳಿತಾತ್ಮಕ ಮಂಜೂರಾತಿ ದೊರೆತ ನಂತರ ನಿರ್ಮಾಣ ಕಾರ್ಯ ಪ್ರಾರಂಭ ಮಾಡಲಾಗುತ್ತದೆ.

ಶ್ರೀ ಆರ್.ಎನ್. ಲಕ್ಷ್ಮೀಪತಿ.—ಇದರ ಬಗ್ಗೆ ನಿಮಗೂ ಕೂಡ ಕಾಗದ ಬರೆದಿದ್ದೇನೆ. ಇಲಾಖೆಯ ಅಧಿಕಾರಿಗಳಿಗೂ ಈ ಬಗ್ಗೆ ಆದೇಶವನ್ನು ನೀಡಿದ್ದೇನೆ.

ಶ್ರೀ ಕೆ.ಎಚ್. ಕುರಡ್ಡಿ.—ರಾಟೆ ಏತ ನೀರಾವರಿಯನ್ನು ಇನ್ನೂ 3–4 ತಿಂಗಳೊಳಗಾಗಿಯಾದರೂ ಈ ಅಂದಾಜನ್ನು ಪೂರ್ಣ ಮಾಡುತ್ತೀರಾ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ರಾಟೆ ಏತ ನೀರಾವರಿ ಯೋಜನೆಯ ಸ್ಥಳ ಮಾಪನವನ್ನು ತರಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ.ಎಚ್. ಕುರಡ್ಡಿ.—6 ತಿಂಗಳೊಳಗಾಗಿಯಾದರೂ ಮಾಡಿ. ಏಕೆಂದರೆ ನಮ್ಮ ಭಾಗದಲ್ಲಿ ಬರಗಾಲ ಇರುವುದರಿಂದ, ಅಲ್ಲಿ ಯಾವುದೇ ನೀರಾವರಿ ಇಲ್ಲದಿರುವುದರಿಂದ, ಏತ ನೀರಾವರಿಗೆ ಆದ್ಯತೆಯನ್ನು ಕೊಟ್ಟು ಇದಕ್ಕೆ ಹೆಚ್ಚಿನ ಆಸಕ್ತಿಯನ್ನು ವಹಿಸಿ ಈ ಒಂದು ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಪ್ರಯತ್ನಮಾಡುತ್ತದೆಯೇ ?

ಶ್ರೀ ಆರ್.ಎನ್. ಲಕ್ಷ್ಮೀಪತಿ.—ತಕ್ಷಣ ವರದಿ ಬಂದ ಕೂಡಲೇ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ಮುಂದೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

ವಿಷಯ :— ಲೋಕೋಪಯೋಗಿ ಇಲಾಖೆಯ ಹುದ್ದೆಗಳ ಬಗ್ಗೆ

ಪ್ರ. 119 (21) ಶ್ರೀ ಬಿ.ಜಿ. ಬಣಕಾರ್ (ಹಿರೇಕೆರೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ. ರಾಜ್ಯದ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) ಇಲಾಖೆಯಲ್ಲಿ ಮಂಜೂರಾಗಿರುವ 1. ಚೀಫ್ ಎಂಜನಿಯರ್ 2. ಸೂಪರಿಂಟೆಂಡಿಂಗ್ ಎಂಜನಿಯರ್ 3. ಎಕ್ಸಿಕ್ಯೂಟಿವ್ ಎಂಜನಿಯರ್ 4. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ 5. ಅಸಿಸ್ಟೆಂಟ್ ಇಂಜನಿಯರ್ ಹುದ್ದೆಗಳ ಮಾಹಿತಿಯನ್ನು ಒದಗಿಸುವುದು ;

ಆ. ವರ್ಕ್ಸ್ ಇನ್‌ಸ್ಪೆಕ್ಟರ್ ಇತರ ಹುದ್ದೆಗಳು ಪ್ರತಿ ಜಿಲ್ಲಾವಾರು ಎಷ್ಟೆಷ್ಟು ಇರುತ್ತವೆ ?

ಇ. ಪ್ರತಿ ಜಿಲ್ಲೆಗಳಲ್ಲಿ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) 80–81, 81–82, 82–83ನೇ ಸಾಲುಗಳನ್ನು ಕೆಲಸಕಾರ್ಯಗಳಿಗಾಗಿ ಮಾಡಿರುವ ಖರ್ಚಿನ ಹಣದ ಮೊತ್ತವೆಷ್ಟು ?

ಈ. ಪ್ರತಿ ಜಿಲ್ಲೆಗಳಲ್ಲಿ ಲೋಕೋಪಯೋಗಿ (ಸಂಪರ್ಕ ಮತ್ತು ಕಟ್ಟಡಗಳು) 80–81, 81–82, 82–83ನೇ ಸಾಲುಗಳಲ್ಲಿ ಚೀಫ್ ಇಂಜಿನಿಯರಿಂದ ಹಿಡಿದು ಮೈಲಿ ಕೂಲಿಯವರೆಗೆ ಎಲ್ಲಾ ನೌಕರರಿಗೆ ಕೊಟ್ಟಿರುವ ಪಗಾರ, ಭತ್ಯ ಇತ್ಯಾದಿ ಬಗ್ಗೆ ಕೊಟ್ಟಿರುವ ಖರ್ಚಿನ ಹಣದ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು) :—